85

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಬಸನಗೌಡ ಬಾದರ್ಲಿ ಇವರು ಪ್ರಸ್ತಾಪಿಸಿರುವ ನಿಯಮ 330ರ ವಿಷಯಕ್ಕೆ ಉತ್ತರ ಸಲ್ಲಿಸುವ ಬಗ್ಗೆ.**

**ವಿಷಯ**

ರಾಜ್ಯ ಸರ್ಕಾರದ ವಿಕಲಚೇತನರ ಕಲ್ಯಾಣ ಇಲಾಖೆಯಿಂದ ಬರುವ ಸವಲತ್ತುಗಳನ್ನು ವಿಕಲಚೇತನರಿಗೆ ತಲುಪಿಸುವ ಕಾರ್ಯವನ್ನು ನಿರ್ವಹಿಸುತ್ತಿರುವ ಸ್ಥಳೀಯ ಸಂಸ್ಥೆಗಳ ಎಂಆರ್‌ಡಬ್ಲ್ಯೂ, ವಿಆರ್‌ಡಬ್ಲ್ಯೂ ಹಾಗೂ ಯುಆರ್‌ಡಬ್ಲ್ಯೂರವರಿಗೆ ಪ್ರಸ್ತುತ ರಾಜ್ಯ ಸರ್ಕಾರದಿಂದ ಕ್ರಮವಾಗಿ ರೂ.15,000 ಹಾಗೂ 10,000ಗಳ ವೇತನವನ್ನು ನೀಡುತ್ತಿದ್ದು, ನೌಕರರಿಗೆ ಪ್ರಸ್ತುತ ದಿನಗಳಲ್ಲಿ ಜೀವನ ಸಾಗಿಸುವುದು ಕಷ್ಟಕರವಾಗಿರುತ್ತದೆ. ಆದುದರಿಂದ ಸದರಿ ನೌಕರರಿಗೆ 2016ರ ವಿಕಲಚೇತನರ ಕಾಯ್ದೆಯನ್ವಯ ಕನಿಷ್ಠ ವೇತನವನ್ನು ಜಾರಿ ಮಾಡುವ ಕುರಿತು ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಸಚಿವರನ್ನು ಕೋರಲು ಬಯಸುತ್ತೇನೆ.

**ಉತ್ತರ**

ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಗ್ರಾಮೀಣ ಪುನರ್ವಸತಿ ಯೋಜನೆಯಡಿ ಗೌರವಧನದ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಗ್ರಾಮೀಣ ಪುನರ್ವಸತಿ ಕಾರ್ಯಕರ್ತರು (VRW) / ವಿವಿಧೋದ್ದೇಶ ಪುನರ್ವಸತಿ ಕಾರ್ಯಕರ್ತರು (MRW) / ನಗರ ಪುನರ್ವಸತಿ ಕಾರ್ಯಕರ್ತರ (URW) ಗೌರವಧನವನ್ನು ಈ ಕೆಳಕಂಡ ವಿವರಗಳಂತೆ ಪಾವತಿಸಲಾಗುತ್ತಿರುತ್ತದೆ.

| ಕ್ರ. ಸಂ | ಪುನರ್ವಸತಿ ಕಾರ್ಯಕರ್ತರ ವಿವರ | ಕಾರ್ಯ ನಿರ್ವಹಿಸುತ್ತಿರುವ ಸ್ಥಳ | ಮಂಜೂರಾದ ಪುನರ್ವಸತಿ ಕಾರ್ಯ ಕರ್ತರ ಸಂಖ್ಯೆ | ಸರ್ಕಾರದ ಆದೇಶ ಸಂಖ್ಯೆ: ಮಮಇ/78/ಪಿಹೆಚ್‌ಪಿ/2022, ದಿನಾಂಕ:14-09-2022ರಂತೆ ಪಾವತಿಸುತ್ತಿರುವ ಗೌರವಧನ ಪಾವತಿಸುತ್ತಿದ್ದ ಮಾಸಿಕ ಗೌರವಧನ | ಸರ್ಕಾರದ ಆದೇಶ ಸಂಖ್ಯೆ: ಮಮಇ/41/ಪಿಹೆಚ್‌ಪಿ/2025, ದಿನಾಂಕ:03-06-2025ರಂತೆ ಹಾಲಿ ಪಾವತಿಸುತ್ತಿರುವ ಗೌರವಧನ |
|---|---|---|---|---|---|
| 1 | **ವಿವಿಧೋದ್ದೇಶ ಪುನರ್ವಸತಿ ಕಾರ್ಯಕರ್ತರು (MRW)** | ತಾಲ್ಲೂಕು ಪಂಚಾಯಿತಿಗಳಲ್ಲಿ | 176 | ರೂ.15000/- | ರೂ.16000/- |
| 2 | **ಗ್ರಾಮೀಣ ಪುನರ್ವಸತಿ ಕಾರ್ಯಕರ್ತರು (VRW)** | ಗ್ರಾಮ ಪಂಚಾಯಿತಿಗಳಲ್ಲಿ | 6022 | ರೂ.9000/- | ರೂ.10000/- |
| 3 | **ನಗರ ಪುನರ್ವಸತಿ ಕಾರ್ಯಕರ್ತರು (URW)** | ನಗರ ಸ್ಥಳೀಯ ಸಂಸ್ಥೆಗಳಲ್ಲಿ | 613 | ರೂ.9000/- | ರೂ.10000/- |

ಆದರೆ, ಗ್ರಾಮೀಣ ಪುನರ್ವಸತಿ ಕಾರ್ಯಕರ್ತರು (VRW) / ವಿವಿಧೋದ್ದೇಶ ಪುನರ್ವಸತಿ ಕಾರ್ಯಕರ್ತರು (MRW) / ನಗರ ಪುನರ್ವಸತಿ ಕಾರ್ಯಕರ್ತರ (URW) ಇವರುಗಳ ಹಿತದೃಷ್ಟಿಯಿಂದ ಗೌರವಧನವನ್ನು ಕನಿಷ್ಠ ವೇತನ ಕಾಯ್ದೆಯಡಿ ತರುವ ಬಗ್ಗೆ ಪ್ರಸ್ತಾವನೆಯನ್ನು ಕಾರ್ಮಿಕ ಇಲಾಖೆಗೆ ಅಭಿಪ್ರಾಯಕ್ಕಾಗಿ ಕಳುಹಿಸಲಾಗಿದೆ. ಕಾರ್ಮಿಕ ಇಲಾಖೆಯಿಂದ ಅಭಿಪ್ರಾಯವನ್ನು ನಿರೀಕ್ಷಿಸಲಾಗಿದೆ.

**ಸಂಖ್ಯೆ:** ಮಮಇ 429 ಪಿಹೆಚ್‌ಪಿ 2025

**(ಲಕ್ಷ್ಮೀ ಆರ್. ಹೆಬ್ಬಾಳಕರ್)**
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ,
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಸಚಿವರು